

# ಖೈದಿಗಳಿಗೆ ಕೌಶಲ್ಯ ತರಬೇತಿ:

## ಸ್ವಾವಲಂಬಿ ಜೀವನಕ್ಕಾಗಿ ಕೆ.ಎಸ್.ಡಿ.ಸಿ.ಯಿಂದ ವಿಶೇಷ ಕಾರ್ಯಕ್ರಮ

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ.), ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರದ ವತಿಯಿಂದ, ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಸಹಯೋಗದೊಂದಿಗೆ, ರಾಜ್ಯದ ಒಟ್ಟು ಎಂಟು ಕೇಂದ್ರ ಕಾರಾಗೃಹಗಳಲ್ಲಿ ಖೈದಿಗಳಿಗೆ ವಿವಿಧ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕೆ.ಎಸ್.ಡಿ.ಸಿ.ಯು ಕಾರಾಗೃಹಗಳಲ್ಲಿ ಖೈದಿಗಳ ಕೌಶಲ್ಯ ಕೊರತೆಯ ಅಧ್ಯಯನ ನಡೆಸಿ, ಸೂಕ್ತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಬೆಂಗಳೂರು ನಗರ, ಬೆಳಗಾವಿ, ವಿಜಯಪುರ, ಮೈಸೂರು, ಧಾರವಾಡ, ಬಳ್ಳಾರಿ, ಶಿವಮೊಗ್ಗ ಹಾಗು ಕಲಬುರ್ಗಿ ಜಿಲ್ಲೆಗಳಲ್ಲಿರುವ ಕೇಂದ್ರ ಕಾರಾಗೃಹಗಳಲ್ಲಿ ಪುರುಷ ಹಾಗು ಮಹಿಳಾ ಖೈದಿಗಳಿಗೆ ಬೇಕರಿ ಪದಾರ್ಥಗಳ ತಯಾರಿಕೆ, ಟೈಲರಿಂಗ್, ಕೇಶವಿನ್ಯಾಸ, ಎಲೆಕ್ಟ್ರಿಷಿಯನ್, ತೋಟಗಾರಿಕೆ, ಡೇಟಾ ಎಂಟ್ರಿ ಆಪರೇಟರ್ ಮುಂತಾದ ಕೌಶಲ್ಯಗಳಲ್ಲಿ ನುರಿತ ತರಬೇತುದಾರರು ಕೌಶಲ್ಯ ತರಬೇತಿಗಳನ್ನು ನೀಡುತ್ತಿದ್ದಾರೆ.

ರಾಜ್ಯದ ಕಾರಾಗೃಹಗಳಲ್ಲಿರುವ ಸಂಪನ್ಮೂಲಗಳ ಹಾಗು ಸ್ಥಾಪಿಸಲಾದ ಉಪಕರಣಗಳ ಸದ್ಬಳಕೆಯ ಗುರಿಯು ಒಂದೆಡೆಯಾದರೆ, ಕಾರಾಗೃಹವಾಸದ ಅವಧಿಯಲ್ಲಿ ಆದಾಯ ಉತ್ಪತ್ತಿ ಚಟುವಟಿಕೆಗಳಲ್ಲಿ ಖೈದಿಗಳನ್ನು ತೊಡಗಿಸಿ, ಅವರ ಆರ್ಥಿಕ ಸ್ವಾವಲಂಬನೆಗೆ ಉತ್ತೇಜನ ನೀಡುವುದು ಹಾಗು ಅವರ ಪುನರ್ವಸತಿಯಲ್ಲಿ ನೆರವಾಗುವುದು ಈ ಕಾರ್ಯಕ್ರಮದ ಧ್ಯೇಯೋದ್ದೇಶಗಳಾಗಿದೆ. ಬಿಡುಗಡೆಯ ನಂತರ ಈ ಕೌಶಲ್ಯಗಳ ನೆರವಿನಿಂದ ಆದಾಯ ಗಳಿಸಿ, ಸಮಾಜ-ಮುಖಿಯಾಗಿ ಇವರು ಬೆಳೆಯುವಲ್ಲಿ ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂಬುದು ಸರ್ಕಾರದ ಆಶಯ.

ಈ ಕಾರ್ಯಕ್ರಮಕ್ಕೆ ಖೈದಿಗಳಿಂದ ಹಾಗು ಕಾರಾಗೃಹ ಅಧಿಕಾರಿಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ. ಬೆಳಗಾವಿಯ ಕೇಂದ್ರ ಕಾರಾಗೃಹದಲ್ಲಿ ಬೇಕರಿ ಪದಾರ್ಥಗಳ ತಯಾರಿಕೆಯಲ್ಲಿ ತರಬೇತಿ ಪಡೆದ ಮೋಸಸ್ ನವರು ಮಾತನಾಡಿ, "ಈ ಕೌಶಲ್ಯ ತರಬೇತಿಯಿಂದ ಮುಂದೆ ಉತ್ತಮ ಜೀವನವನ್ನು ಕಟ್ಟಿಕೊಳ್ಳಬಹುದೆಂಬ ಆತ್ಮವಿಶ್ವಾಸ ದೊರೆತಿದೆ" ಎಂದು ಅಭಿಪ್ರಾಯ ಹಂಚಿಕೊಂಡರು.

ಈ ಕಾರ್ಯಕ್ರಮವು ರಾಜ್ಯದ ಇತರೆ ಕಾರಾಗೃಹಗಳಲ್ಲಿ ಇನ್ನಷ್ಟು ಜನರಿಗೆ ಕೌಶಲ್ಯ ಅಭಿವೃದ್ಧಿಯ ಪ್ರಯೋಜನಗಳನ್ನು ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕಛೇರಿಗಳ ಮೂಲಕ ತಲುಪಿಸುವ ಗುರಿಗೆ ಉತ್ತಮ ಮುನ್ನುಡಿ ಬರೆದಿದೆ.





ಹೆಚ್ಚಿನ ಮಾಹಿತಿಗಾಗಿ
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆಎಸ್‌ಡಿಸಿ)**

**ಕೆಎಸ್‌ಡಿಸಿ, ಕೌಶಲ್ಯ ಭವನ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029**
**ವೆಬ್‌ಸೈಟ್ www.kaushalkar.com ಅಥವಾ ದೂರವಾಣಿ ಸಂಖ್ಯೆ: 080-29555 085**



# Skill Training for Prison Inmates: A Special Programme for Self-Reliance by KSDC

The Karnataka Skill Development Corporation (KSDC), Department of Skill Development, Entrepreneurship and Livelihood (SDEL), Government of Karnataka, is collaborating with the Department of Prisons and Correctional Services, for providing various skill development trainings to inmates of 8 central prisons of the state.

KSDC conducted surveys in the prisons to assess the skill gaps and interests of the candidates to introduce suitable skilling programmes. Male and female inmates at the central prisons of Bengaluru Urban, Belagavi, Vijayapura, Mysuru, Dharwad, Ballari, Shivamogga and Kalaburagi are undergoing skill development by expert trainers in various job roles including baking technician, self-employed tailor, hair stylist, electrician, gardener, and data entry operator.

The effective utilization of the existing resources and infrastructure in the prisons is a major objective of this programme. More importantly, the aim of the programme is to engage the inmates in income-generating activities within the prison to encourage their financial independence. The skills learned through this programme will help the inmates in securing gainful employment for rehabilitation after their release, thereby helping them to become productive members of the society.

The programme has received positive response from inmates as well as prison officials. Mr Moses who was trained in making bakery products at the Belagavi prison remarked thus: “Through this skill development programme, I am now confident that I can build a better life”.

This programme has set a successful precedent for reaching out to beneficiaries at the prisons through the District Skill Development Offices.





scan QR code
for more info

**Karnataka Skill Development Corporation (KSDC)**

KSDC, Kaushalya Bhavan, Diary Circle, Bannerghatta Road, Bangalore- 560 029
www.kaushalkar.com and telephone : 080-29555 085